ಶ್ರೀ ಬಿ. ರಾಚಯ್ಯ.—ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೂ ಮಂತ್ರಿಗಳಾಗಿದ್ದವರು. ಅವರಿಗೆ ಗೊತ್ತಿದೆ.

ಶ್ರೀ ಬಿ. ಎಚ್. ಯಂಕಾನಾಯಕ್ —ಮುಖ್ಯಮಂತ್ರಿಗಳು ಉತ್ತರ ಹೇಳಬೇಕು. ಆಗದೇ ಇದ್ದರೆ ಆಗುವುದಿಲ್ಲ ಎಂದು ಹೇಳಿ.

ಅಧ್ಯಕ್ಷರು.—ಅವರು ಉತ್ತರ ಹೇಳಿದ್ದಾರೆ.

ಶ್ರೀ ಬಿ. ಎಚ್. ಯಂಕಾನಾಯಕ್,—ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಲಿ. ಇಲ್ಲ ಎಂದರೆ ಆಗುವುದಿಲ್ಲ ಎಂದು ಹೇಳಲಿ. ಪ್ರೆಸ್‌ನವರು ಮಂತ್ರಿ ಸಾರ್ವಜನಿಕರ ಎದುರಿಗಡೆ ಮಾಡಿಸಿಕೊಡುತ್ತೇನೆಂದು ಹೇಳಿದ್ದಾರೆ.

ಅಧ್ಯಕ್ಷರು.—ಇನ್ನೊಂದು ಸಾರಿ ಅವರಿಗೆ ಉತ್ತರ ಹೇಳಿ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಇಲ್ಲದಿದ್ದರೆ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಯಂಕಾನಾಯಂಕ್ ಅವರು ತಮ್ಮ ಸ್ಥಳದಿಂದ ಪಕ್ಕಕ್ಕೆ ಬಂದರು)

ಶ್ರೀ ಬಿ. ರಾಚಯ್ಯ.—ಅವರು ಸೀಟು ಬಿಟ್ಟು ಈಚೆ ಬಂದರೆ ಉತ್ತರ ಕೊಡುವುದಿಲ್ಲ. ಅಲ್ಲೇ ನಿಂತು ಕೇಳಿದರೆ ಹೇಳುತ್ತೇನೆ

ಶ್ರೀ ಬಿ. ಹೆಚ್. ಯಂಕಾನಾಯಕ್.—ಆಗದಿದ್ದರೆ ಆಗುವುದಿಲ್ಲ ಎಂದು ಹೇಳಿ.

ಶ್ರೀ ಬಿ. ರಾಚಯ್ಯ.—ಕೂತ್ಕೊಳ್ಳಿ ಅಧ್ಯಕ್ಷರೇ ಅವರಿಗೆ ಕೂರುವುದಕ್ಕೆ ಹೇಳಿ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಮುಖ್ಯಮಂತ್ರಿಗಳು ಹೇಳಬೇಕು. ಇಲ್ಲದಿದ್ದರೆ ನಾನು ಸಭಾತ್ಯಾಗ ಮಾಡುತ್ತೇನೆ.

ಅಧ್ಯಕ್ಷರು.—ಆಸ್ಪತ್ರೆ ಆದಷ್ಟು ಬೇಗನೆ ಮಾಡಿಸಂತ್ತಾರೆ ಕೂತ್ಕೊಳ್ಳಿ.

ಶ್ರೀ ರಾಮಕೃಷ್ಣಹೆಗಡೆ (ಮುಖ್ಯಮಂತ್ರಿಗಳು).—ಅಧಕ್ಷರೇ, ಅವರ ಊರಿನಲ್ಲೇ ಹೇಳಿ ಬಂದಿದ್ದೇನೆ. ಇನ್ನು ಇಲ್ಲಿ ಹೇಳುವುದು ಏನು ದೊಡ್ಡದು ? ಅವರ ಮತದಾರರ ಎದುರುಗಡೆಯೇ ಹೇಳಿದ್ದೇನೆ. ಆಲ್ಲಿ ಏನು ಹೇಳಿದ್ದೇನೋ ಅದನ್ನು ಮಾಡಿಸಿಕೊಡುತ್ತೇನೆ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಆಗದಿದ್ದರೆ ಇಲ್ಲ ಎಂದು ಹೇಳಿ.

ಅಧ್ಯಕ್ಷರು.—ಮಾಡಿಸಿಕೊಡುತ್ತೇನೆ ಎಂದು ಹೇಳುತ್ತಿದ್ದಾರೆ. ಅಷ್ಟು ಭರವಸೆ ಇಲ್ಲವೇ ನಿಮಗೆ? ನೀಲಕಂಠಪ್ಪನವರೆ, ತಮ್ಮ ಪ್ರಶ್ನೆ ಕೇಳಿ.

ತರೀಕೆರೆ ತಾಲ್ಲೂಕು ಹಂಣಸೆಘಟ್ಟಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ

೯೧೬ ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತರೀಕೆರೆ ತಾಲ್ಲೂಕಿನ ಹುಣಸೇಘಟ್ಟ ಸರ್ಕಾರಿ ಪ್ರಾಥಮಿಕ ಆರೋಗ್ಯ ಘಟಕವನ್ನು ಆರೋಗ್ಯ ಕೇಂದ್ರವನ್ನಾಗಿ ಪರಿವರ್ತಿಸಲು ಸರ್ಕಾರಕ್ಕೆ ಮನವಿ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಯಾವಾಗ ಮಂಜೂರಾತಿ ನೀಡಲಾಗುವುದು ?

ಇ) ಗ್ರಾಮಸ್ಥರು ೧,೨೫,೦೦೦ ರೂ. ಗಳ ವಂತಿಗೆ ಸಂಗ್ರಹಿಸಿ ಆಡಳಿತ ಮಂಜೂರಾತಿಗಾಗಿ ಕಾಯಂತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಇದರ ಬಗ್ಗೆ ಜಿಲ್ಲಾ ಪರಿಷತ್‌ನವರು ಶಿಫಾರಸ್ಸು ಮಾಡಿದ್ದಾರೆಯೇ ಹಾಗಿದ್ದಲ್ಲಿ ಯಾವಾಗ ಕಾರ್ಯಗತ ಮಾಡಲಾಗುವುದು ?

ಶ್ರೀ ಬಿ. ಜಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ಬಂದಿದೆ.

ಆ) ೧೯೮೮–೮೯ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ತು ಅಗತ್ಯ ಹಣ ಒದಗಿಸಿ, ಶಿಫಾರಸ್ಸು ಮಾಡಿದಲ್ಲಿ ಮಂಜೂರು ಮಾಡಲಾಗುವುದು.

ಇ) ಹೊಣಸೇಘಟ್ಟ ಪ್ರಾಥಮಿಕ ಆರೋಗ್ಯ ಘಟಕಕ್ಕೆ ೧೦ ಹಾಸಿಗೆಗಳ ಪ್ರಸೂತಿ ಗೃಹ ಮಂಜೂರಾತಿಗಾಗಿ ಮಾತ್ರ ೧ ಲಕ್ಷ ರೂ. ಗಳನ್ನು ಸಂಗ್ರಹಿಸಿ ಬ್ಯಾಂಕ್‌ನಲ್ಲಿ ಇಟ್ಟಿರುವ ಬಗ್ಗೆ ಮಾಹಿತಿ ಇರುತ್ತದೆ.

ಈ) ಜಿಲ್ಲಾ ಪರಿಷತ್ತಿನಿಂದ ಶಿಫಾರಸ್ಸು ಬಂದ ನಂತರ ಪರಿಶೀಲಿಸಲಾಗುವುದು.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪರಿಷತ್ತಿನಿಂದ ಶಿಫಾರಸ್ಸು ಬಂದ ನಂತರ ಕಟ್ಟಡ ಕಟ್ಟುತ್ತೇವೆ ಎಂದು ಹೇಳಿದರು. ೧೯೮೭–೮೮ ರಲ್ಲಿ ಈ ಕೇಂದ್ರವನ್ನು ಮಂಜೂರು ಮಾಡಿಕೊಡಿ ಎಂದು ಜಿಲ್ಲಾಪರಿಷತ್ತು ಶಿಫಾರಸ್ಸು ಮಾಡಿದೆ. ಆದ್ದರಿಂದ ಈ ಬಗ್ಗೆ ಪುನರ್‌ಪರಿಶೀಲನೆ ಮಾಡಿ. ಮತ್ತು ಈ ವಿಷಯದಲ್ಲಿ ನನಗೆ ಆರೋಗ್ಯ ಕಾರ್ಯದರ್ಶಿಯವರು ಉತ್ತರ ಬರೆದಿದ್ದಾರೆ. ಅದರಲ್ಲಿ ೮೦ ಪ್ರಾಥಮಿಕ ಆರೋಗ್ಯ ಕೇಂದ್ರ ಈಗಾಗಲೇ ಕೊಟ್ಟಿರುವುದರಿಂದ ಈ ಸಾರಿ ಇದನ್ನು ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ೧೯೮೭–೮೮ನೇ ಸಾಲಿನಲ್ಲಿ ಕೊಡಿ ಎಂದು ಜಿಲ್ಲಾ ಪರಿಷತ್ತಿನವರು ಹೇಳಿರುವುದರಿಂದ ಆದರಂತೆ ಕೊಡುತ್ತೀರಾ ? ೧ ಲಕ್ಷ ೨೫ ಸಾವಿರ ರೂಪಾಯಿಗಳ ವಂತಿಕೆಯನ್ನು ನಾವು ಈಗಾಗಲೇ ಸಂಗ್ರಹಿಸಿದ್ದೇವೆ. ಆದ್ದರಿಂದ ಆಸ್ಪತ್ರೆಯನ್ನು ಅಪ್‌ಗ್ರೇಡ್ ಮಾಡುವುದಕ್ಕೆ ಅನುಮತಿ ಕೊಟ್ಟರೆ ಆ ರೀತಿ ಮಾಡಬಹುದು. ಸಾರ್ವಜನಿಕ ಹಣವನ್ನು ಉಪಯೋಗಿಸಿಕೊಂಡು ೧೯೮೭–೮೮ ರಲ್ಲಿ ಏತಕ್ಕೆ ಮಾಡುವುದಕ್ಕೆ ಅನುಮತಿ ಕೊಡಬಾರದು ?

ಶ್ರೀ ಬಿ. ರಾಚಯ್ಯ.—ಈಗ ತರೀಕೆರೆ ಹಾಗೂ ಅಜ್ಜಂಪುರ ಗ್ರಾಮಗಳಿಗೆ ಆದ್ಯತೆಯನ್ನು ಕೊಡಬೇಕೆಂದು ಜಿಲ್ಲಾ ಪರಿಷತ್ತಿನವರು ಶಿಫಾರಸ್ಸು ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದಿನ್ನೂ ನನಗೆ ಬಂದಿಲ್ಲ. ನನಗೆ ಬಂದ ಮೇಲೆ ಅದನ್ನು ಪರಿಶೀಲನೆ ಮಾಡಿ ೧೯೮೮–೮೯ನೇ ಸಾಲಿನಲ್ಲಿ ಮಂಜೂರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ.— ಅಜ್ಜಂಪುರಕ್ಕೆ ಈಗಾಗಲೇ ೧೦–೧೫ ವರ್ಷಗಳ ಹಿಂದೆಯೇ ಮಂಜೂರಾಗಿದೆ. ೧೯೮೭–೮೮ನೇ ಸಾಲಿನಲ್ಲಿಯೇ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಕೊಡಬೇಕೆಂದು ಜಿಲ್ಲಾ ಪರಿಷತ್ತಿನವರು ಶಿಫಾರಸ್ಸು ಮಾಡಿದ್ದಾರೆ.

ಶ್ರೀ ಬಿ. ರಾಚಯ್ಯ.—ಹೊಣಸೆ ಘಟ್ಟಕ್ಕೆ ಆರೋಗ್ಯ ಕೇಂದ್ರವನ್ನು ಕೊಡಬೇಕೆಂದು ಜಿಲ್ಲಾ ಪರಿಷತ್ತಿನವರು ಶಿಫಾರಸ್ಸು ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದು ನನಗೆ ಬಂದ ಮೇಲೆ ಪರಿಶೀಲನೆ ಮಾಡಿ ಮಂಜೂರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ.—೧೯೮೭–೮೮ನೇ ಸಾಲಿನಲ್ಲೇ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಬೇಕೆಂದು ಜಿಲ್ಲಾಪರಿಷತ್ತಿನವರು ಹಣವನ್ನೂ ಕೂಡ ಡಿಪಾಜಿಟ್ ಮಾಡಿದ್ದಾರೆ. ಈ ಸಾಲಿನಲ್ಲೇ ಮಂಜೂರು ಮಾಡಿ ಕೊಡುತ್ತೀರಾ?

ಶ್ರೀ ಬಿ. ರಾಚಯ್ಯ.—೧೯೮೮–೮೯ನೇ ಸಾಲಿನಲ್ಲಿ ಆ ಹಳ್ಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಶ್ರೀಮಾನ್ ಹಿಂಡಸ್‌ಗೇರಿಯವರೇ ನಿಮ್ಮ ಪ್ರಶ್ನೆ ನಂ. ೨೨೦ (೬೨೧) ಅನ್ನು ಬೇರೆ ಇಲಾಖೆಗೆ ಸಂಬಂಧಪಡುವುದರಿಂದ ಮುಂದಕ್ಕೆ ಹಾಕಲಾಗಿದೆ. ನಂತರ ಉತ್ತರವನ್ನು ತರಿಸಿಕೊಡಲಾಗುವುದು.